**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 49/2024**

**ಫಿರ್ಯಾದುದಾರರು** ದಿ. ಜನತಾ ಕೊ.ಆಪರೇಟಿವ್‌ಕ್ರೆಡಿಟ್ ಸೊಸೈಟಿ ಲಿಮಿಟೆಡ್, ಭಟ್ಕಳ
ಮುರ್ಡೇಶ್ವರ ಶಾಖೆ,
ಪ್ರತಿನಿಧಿಸುವವರು ಶಾಖಾ ವ್ಯವಸ್ಥಾಪಕರು/ ಅಧಿಕೃತ ಪ್ರತಿನಿಧಿಗಳು
ಶ್ರೀ ರಾಮಚಂದ್ರ ತಂದೆ ಮಂಜುನಾಥ ಹೆಗಡೆ

**– ವಿರುದ್ಧ –**

**ಆರೋಪಿತರು** ಶ್ರೀ ಶಂಕರ ತಂದೆ ಮಾದೇವ ನಾಯ್ಕು
ಸಾಃ ಹೊನ್ನೆಹಕ್ಕಲ, ಕೆ.ಜಿ. ಶಾಲೆ ಹತ್ತಿರ,
ಮುರ್ಡೇಶ್ವರ, ಭಟ್ಕಳ ತಾಲುಕು.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 18–12–2018 ರಂದು ಪಿರ್ಯಾದಿ ಸೊಸೈಟಿಯ ಮುರ್ಡೇಶ್ವರ ಶಾಖೆಯಲ್ಲಿ ರೂ.5,20,000/– (ರೂಪಾಯಿ ಐದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆ VL–363 ರಲ್ಲಿ ವಾಹನ ಸಾಲವಾಗಿ ಪಡೆದುಕೊಂಡಿರುತ್ತೀರಿ. ದಿನಾಂಕಃ 05–10–2023 ರಂದು ನಿಮ್ಮ ಸಾಲದ ಖಾತೆಯಲ್ಲಿ ರೂ.6,25,078/– (ರೂ.4,88,981/– ಅಸಲು, ರೂ.1,25,498/– ಬಡ್ಡಿ , ರೂ.10,599/– ದಂಡದ ಬಡ್ಡಿ ದಿನಾಂಕಃ 05–10–2023 ರವರೆಗೆ) ಬಾಕಿ ಇರುತ್ತದೆ. ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಕರ್ನಾಟಕ ಬ್ಯಾಂಕ್, ತ್ರಾಸಿ ಶಾಖೆಯ ಚೆಕ್ ನಂಬರ್ 840181 ನ್ನು ರೂ.6,24,000/– (ರೂಪಾಯಿ ಆರು ಲಕ್ಷದ ಇಪ್ಪತ್ತನಾಲ್ಕು ಸಾವಿರ ಮಾತ್ರ)ಕ್ಕೆ ದಿನಾಂಕಃ 05–10–2023 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಕೆನರಾ ಬ್ಯಾಂಕ್, ಮುರ್ಡೇಶ್ವರ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, “Drawers signature differs" ಎಂಬ ಹಿಂಬರಹದೊಂದಿಗೆ ದಿನಾಂಕಃ 09–10–2023 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ಚೆಕ್ಕಿನ ಹಣವನ್ನು 15 ದಿನಗಳೊಳಗಾಗಿ ಸಂದಾಯ ಮಾಡುವಂತೆ, ದಿನಾಂಕಃ 19–10–2023 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ಸದ್ರಿ

ನೋಟಿಸು Unclaimed ಅಂತಾ ದಿನಾಂಕಃ 01-11-2023 ರಂದು ವಾಪಾಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – Yes

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – Pleaded not guilty

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**Sd/-**

**(ಶ್ರೀಮತಿ. ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 06-11-2024

ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.